



ಉದ್ಯಾನವನದಲ್ಲಿ ಖರ್ಜೂರ ವೃಕ್ಷ, ತಾಯಿಫ್

ಕೈಮೇಜುಗಳ ಮೇಲೆ, ಖರ್ಜೂರ ಬದಾಮಿ ಪಿಸ್ತಾ ತುಂಬಿದ ತಟ್ಟೆಗಳನ್ನು ಇಡಲಾಗುತ್ತಿತ್ತು. ನಾನು ಭಾಗಿಯಾದ ಒಂದು ಮದುವೆಯಲ್ಲಿ ಬೀಜ ತೆಗೆದು ಬದಾಮಿ ತುಂಬಿದ ಖರ್ಜೂರಗಳನ್ನು ಜೋಡಿಸಿ ಒಂದು ಮರವನ್ನು ನಿರ್ಮಿಸಿದ್ದರು. ಅತಿಥಿಗಳು ಅಲ್ಲಿಂದ ಹಣ್ಣನ್ನು ತೆಗೆದುಕೊಂಡು ತಿಂದು, ಸಣ್ಣ ಗ್ಲಾಸಿನಲ್ಲಿ ಕೊಡುವ ಚಹ ಸೇವಿಸಿ ಹಾಲಿನೊಳಗೆ ಪ್ರವೇಶಿಸುತ್ತಿದ್ದರು. ಪ್ರಸಿದ್ಧ ಮಸೀದಿಯ ಪ್ರವೇಶದ್ವಾರಗಳಲ್ಲಿ ದೊಡ್ಡ ಹರಿವಾಣಗಳಲ್ಲಿ ಸುಕ್ರಿ ಖರ್ಜೂರವನ್ನು ಇಡಲಾಗಿರುತ್ತಿತ್ತು. ಪ್ರಾರ್ಥನೆಗೆ ಬಂದವರು ಅದನ್ನು ಸೇವಿಸುತ್ತಿದ್ದರು. ಶುಕ್ರವಾರದ ಪ್ರಾರ್ಥನೆ ಮುಗಿಸಿ ಜನರು ಮಸೀದಿಯಿಂದ ಗೂಡಿನಿಂದ ಇರುವೆಗಳ ಹಾಗೆ ಹೊರಬರುತ್ತಿದ್ದಂತೆ, ಅಂಗಳದಲ್ಲಿ ಸ್ಥಳೀಯ ರೈತರು ಖರ್ಜೂರದ ಪೆಟ್ಟಿಗೆಗಳನ್ನು ಇಟ್ಟುಕೊಂಡು ಸಂತೆ ಮಾಡಿರುತ್ತಿದ್ದರು.

ನಾವು ಯಾವುದೇ ಊರಿಗೆ ಹೋದಾಗ, ಅಲ್ಲಿನ ಖರ್ಜೂರದ ಮಂಡಿಗಳಿಗೆ ಹೋಗುತ್ತಿದ್ದೆವು. ಖರ್ಜೂರದ ಮರದಿಂದ ರಸ ಇಳಿಸುವುದನ್ನು ಎಲ್ಲೂ ಕಾಣಲಿಲ್ಲ. ಆದರೆ ಮಾರುಕಟ್ಟೆಗಳಲ್ಲಿ ಖರ್ಜೂರದ ಮರದ ಸುಳಿಯನ್ನು ಸುಲಿದು, ಗಿಣ್ಣದಂತಹ ಅದರ ಗರ್ಭವನ್ನು ಕತ್ತರಿಸಿ ಮಾರುವುದನ್ನು ನೋಡಿದೆವು. ನಾವು ಬಾಲ್ಯದಲ್ಲಿ ತಿನ್ನುತ್ತಿದ್ದ ಈಚಲುಮರದ ಗಿಣ್ಣದಂತೆಯೇ ಅದಿರುತ್ತಿತ್ತು. ಅರಬ್ಬರ ಬಹುತೇಕ ಸಿಹಿತಿನಿಸುಗಳಲ್ಲಿ ಖರ್ಜೂರ ಕಡ್ಡಾಯ. ತಿಂಡಿ ಅಂಗಡಿಗಳಲ್ಲಿ ಖರ್ಜೂರದ ನೂರಾರು ಬಗೆಯ ಬಿಸ್ಕತ್ತು, ಕೇಕು, ಮಿಠಾಯಿಗಳು. ಗ್ರಾಹಕರಿಗೆ ರುಚಿ ನೋಡಲು ಖರ್ಜೂರ ತುಂಬಿದ ಹರಿವಾಣಗಳನ್ನು ಎದುರೇ ಇಡಲಾಗಿರುತ್ತಿತ್ತು. ಎಷ್ಟಾದರೂ ತಿನ್ನಬಹುದು. ಇರಾಕಿನ ಕರ್ಬಲಾ ನಗರದಲ್ಲಂತೂ ಯಾತ್ರಾರ್ತ್ರಿಗಳಿಗಾಗಿ ಅಂಗಡಿಯವರು ಖರ್ಜೂರದ ಕ್ರೇಟುಗಳನ್ನು ಸ್ಟೂಲಿನ ಮೇಲೆ ಧರ್ಮಾರ್ಥ ಇಟ್ಟಿರುತ್ತಿದ್ದರು.

ಅರಬ್ ದೇಶಗಳ ಗ್ರಾಮೀಣ ಭಾಗದಲ್ಲಿ ಇನ್ನೂ ಕಚ್ಚಾಮಣ್ಣಿನ ಮನೆಗಳನ್ನು ನೋಡಬಹುದು. ಅವು ಖರ್ಜೂರದ ಕಾಂಡಗಳನ್ನು ಬಳಸಿ ಕಟ್ಟಿದ ಮಣ್ಣಿನ ಮಾಳಿಗೆ ಮನೆಗಳು. ಅವುಗಳ ಗೋಡೆಯನ್ನು ಖರ್ಜೂರದ ಗರಿಯನ್ನು ಬೆರೆಸಿದ ಮಣ್ಣಿನಿಂದ ಕಟ್ಟಲಾಗಿತ್ತು. ಖರ್ಜೂರದ ಮುಳ್ಳಿನ ಗರಿಗಳಿಂದ ಹಿತ್ತಲುಗಳಿಗೆ ಬೇಲಿ ಕಟ್ಟುವುದು ಸಾಮಾನ್ಯವಾಗಿತ್ತು. ಮುದುಕಿಯರು ಖರ್ಜೂರದ ಎಲೆಗಳಿಂದ ಮಾಡಿದ ಚಾಪೆ ಹಾಸಿಕೊಂಡು, ಬೀಸಣಿಗೆಯಲ್ಲಿ ಗಾಳಿ ಹಾಕಿಕೊಂಡು ಕೂತಿರುವುದನ್ನು ನೋಡಬಹುದಿತ್ತು. ಸರ್ವಂ ಖರ್ಜೂರಮಯಂ. ಮರುಭೂಮಿ, ಬಿಸಿಲು, ಒಂಟೆ, ಓಯಸಿಸ್, ಗುಲಾಬಿ ತೋಟ, ಸುಗಂಧಗಳ ಹಾಗೇ ಖರ್ಜೂರವೂ ಅರಬಸ್ಥಾನದ ಲಕ್ಷಣ. ಆದರೆ ಅರಬ್ಬಿ ಸಾಹಿತ್ಯದಲ್ಲಿ ಒಂಟೆ, ದ್ರಾಕ್ಷಿ, ದಾಳಿಂಬೆ, ಕಲ್ಲಂಗಡಿ, ಓಯಸಿಸ್‌ಗಳ ಕಾಣುವಷ್ಟು ಚಿತ್ರಗಳು, ಖರ್ಜೂರದ ಮರದ ಬಗ್ಗೆ ಕಾಣುವುದಿಲ್ಲ. ಇಲ್ಲಿನ ಆದಿಮ ಶಿಲಾಯುಗದ ಬಂಡೆಕೆತ್ತನೆಗಳಲ್ಲಿ ಒಂಟೆ ಕುದುರೆಗಳಿವೆ. ಖರ್ಜೂರದ ಮರ ಕಡಿಮೆ. ರಿಯಾದಿನ ಮ್ಯೂಸಿಯಂನಲ್ಲಿ ಖರ್ಜೂರವೃಕ್ಷದ ಚಿಹ್ನೆಯುಳ್ಳ ಒಂದೇ ಒಂದು ಅರಬ್ಬೀಶಾಸನ ನೋಡಲು ಸಿಕ್ಕಿತ್ತು. ಇಸ್ರೇಲಿನಲ್ಲಿರುವ ಪ್ರಾಚೀನ ಯಹೂದಿ ಪ್ರಾರ್ಥನಾಲಯ (ಸಿನಗಾಗ್)ಗಳಲ್ಲಿ ದ್ರಾಕ್ಷಿಬಳ್ಳಿ, ಆಲಿವ್ ಗಿಡಗಳ ಜತೆ ಖರ್ಜೂರದ ಗಿಡಗಳನ್ನು ನಾವು ಗಮನಿಸಬಹುದು. ಇರಾನಿನ ಶಿಯಾಗಳು, ಅರಬ್ಬರಲ್ಲಿ ಚಿತ್ರಕಲೆ, ಶಿಲ್ಪಕಲೆಗಳನ್ನು ನಿಷೇಧಿಸಿಕೊಳ್ಳಲಿಲ್ಲ. ಅವರ ಚಿತ್ರಕಲೆ ಮತ್ತು ರತ್ನಗಂಬಳಿಗಳಲ್ಲಿ ಖರ್ಜೂರದ ಮರಗಳಿವೆ.

ಅರಬ್ಬರ ಬದುಕಿನಲ್ಲಿ ಸರ್ವವ್ಯಾಪಿಯಾಗಿರುವುದಕ್ಕೂ, ಕುರಾನಿನಲ್ಲಿ ಖರ್ಜೂರದ ಪ್ರಸ್ತಾಪವು ಹಲವು ಸಲ ಬರುವುದಕ್ಕೂ ಸಂಬಂಧವಿದೆ. ಖರ್ಜೂರವು ಅರಬ್ಬರ ಧಾರ್ಮಿಕ ಮತ್ತು ದೈನಿಕ ಸಂಸ್ಕೃತಿಯ ಭಾಗವಾಗಿದೆ. ಮಾತೆ ಮೇರಿಯನ್ನು ಕುರಿತ ಅಧ್ಯಾಯದಲ್ಲಿ, ಪ್ರಸವವೇದನೆಯಿಂದ ಬಳಲುತ್ತಿದ್ದ ಮೇರಿಗೆ ಅಲ್ಲಾಹನ ಅಶರೀರವಾಣಿಯಾದ ಪ್ರಸ್ತಾಪವಿದೆ. ಅಗೋಚರ ದನಿಯೊಂದು ಹೀಗೆ ನುಡಿಯಿತಂತೆ: 'ಎಲೈ ಮರಿಯಂ, ದುಃಖಿಸದಿರಿ. ಹಣ್ಣು ತುಂಬಿದ ಖರ್ಜೂರ ಮರವನ್ನು ಅಲ್ಲಾಡಿಸಿದರೆ ಮಾಗಿದ ತಾಜಾ ಹಣ್ಣುಗಳು ಬೀಳುತ್ತವೆ. ಅವನ್ನು ತಿಂದು ನೀರು ಕುಡಿಯಿರಿ. ನಿಮ್ಮ ಸಂಕಟ ಕಡಿಮೆಯಾಗುವವು'. ಖರ್ಜೂರವು ದೇವರು ತಮಗೆ ಕಳಿಸಿದ ಅಮೃತಫಲವೆಂದು